

ಅಲ್ಲಿಂದ ಹಿಡಿದು ಮುಂದೆ ಇಪ್ಪತ್ತು ವರ್ಷಗಳ ಕಾಲ ಅವನು ತನ್ನ ನಿಜವಾದ ದೊರೆಯಾದ ಏಸುಕ್ರಿಸ್ತನ ವಿಧೇಯ ಅಧಿಕಾರಿಯಾಗಿ ಸಾರ್ಥಕ ಜೀವನವನ್ನು ನಡೆಸಿದ್ದನ್ನು ನೋಡುತ್ತೇವೆ.

ಫ್ರಾನ್ಸಿಸ್ ತನ್ನೆಲ್ಲ ಪ್ರಾಪಂಚಿಕ ಸಂಬಂಧಗಳನ್ನೂ ಕಡಿದು ಕೊಂಡನು. ಪೂರ್ಣ ಬಡತನದ ಬಾಳನ್ನು ತಾನಾಗಿಯೇ ಅಪ್ಪಿ ಕೊಂಡನು. ಅವನು ಸಾನ್ ಡಮಿಯಾನೋ ಚರ್ಚ್ ಕಟ್ಟಡದ ನವೀ ಕರಣವನ್ನು ಕೈಗೊಂಡನು. ಇದಲ್ಲದೆ ಪ್ರವಾದಿ ಸಂತ ಪೀಟರನಿಗೆ ಮುಡಿಪಾಗಿದ್ದ ಒಂದು ಪ್ರಾರ್ಥನಾಮಂದಿರದ ಪುನರುದ್ಧಾರ ಕಾರ್ಯವನ್ನೂ ಕೈಗೆತ್ತಿಕೊಂಡನು. ಅಸಿಸ್ಸಿಗಿಂತ ಕೆಳಗಿನ ವಲಯ ದಲ್ಲಿರುವ ಪೊರ್ಟಿಯುನ್‌ಕುಲ ಎಂಬ ಸಮತಟ್ಟು ಪ್ರದೇಶ ದಲ್ಲಿ ರುವ ಸಂತ ಮೇರಿ ಆಫ್ ಎಂಜೆಲ್ಸ್ ಚರ್ಚ್‌ನ ಪುನರುಜ್ಜೀವನ ಕಾರ್ಯವನ್ನೂ ನಡೆಸಿದನು. ಇದಲ್ಲದೆ ತಪಸ್ವಿಯ ನಿಲುವಂಗಿ ಯನ್ನು ಧರಿಸಿ, ಎರಡು ವರ್ಷಗಳಿಗೂ ಹೆಚ್ಚುಕಾಲ ಕುಷ್ಠರೋಗಿಗಳ ಸೇವೆಯನ್ನು ನಿಸ್ಪೃಹವಾಗಿ ಮಾಡಿದನು.

ಅನಂತರ, ೧೨೦೮ರ ಫೆಬ್ರವರಿ ೨೪ನೆಯ ತಾರೀಖು ಸಂತ ಮಥಿಯಾಸ್‌ನ ಪುಣ್ಯಾರಾಧನೆಯಂದು ಪ್ರವಚನಕಾರರ ಉಪದೇಶ ವಾಣಿಯನ್ನು ಆಲಿಸಿದನು. ಬೈಬಲ್ಲಿನ 'ಮಾಥ್ಯೂ ಬರೆದ ಸುವಾರ್ತೆ' ಅಧ್ಯಾಯದಲ್ಲಿ ಬರುವ ಒಂದು ಪ್ರಸಂಗ (೧೦ : ೭, ೯-೧೧) ಅವನ ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿತು. ಇದರಲ್ಲಿ ಪ್ರಭು ಏಸುಕ್ರಿಸ್ತನು ತನ್ನ ಶಿಷ್ಯಂದಿರಿಗೆ ಹೀಗೆ ಹೇಳು ತ್ತಿದ್ದಾನೆ: ''ನೀವೆಲ್ಲರೂ ಎಲ್ಲೆಡೆ ಪ್ರಯಾಣ ಮಾಡಿ. ಪ್ರಯಾಣ ಮಾಡುವ ಸಮಯದಲ್ಲಿ 'ಸಾಮ್ರಾಜ್ಯವು ನಿಮ್ಮ ಕೈಯಲ್ಲಿದೆ' ಎಂಬ ಸಂದೇಶವನ್ನು ಎಲ್ಲ ಕಡೆ ಪ್ರಸಾರ ಮಾಡಿ... ಯಾವ ಚಿನ್ನದ ಪದಾರ್ಥವನ್ನೂ ಕೊಂಡೊಯ್ಯದಿರಿ; ಯಾವ ಬೆಳ್ಳಿಯ ಪದಾರ್ಥ ವನ್ನೂ ಕೊಂಡೊಯ್ಯದಿರಿ; ಯಾವ ಹಣವನ್ನೂ ಕೊಂಡೊಯ್ಯದಿರಿ. ನಿಮ್ಮ ಜೊತೆಗೆ ಪ್ರಯಾಣದ ಚೀಲವನ್ನೂ ಕೊಂಡೂಯ್ಯದಿರಿ, ಎರಡು ನಿಲುವಂಗಿಗಳೂ ಬೇಡ, ಚಪ್ಪಲಿಗಳ ಅವಶ್ಯಕತೆಯೂ ಇಲ್ಲ, ಒಂದು ಕೋಲನ್ನೂ ಇಟ್ಟುಕೊಳ್ಳದಿರಿ. ಏಕೆಂದರೆ ಕೆಲಸಗಾರನು ಮಾತ್ರವೇ ಆಹಾರವನ್ನು ಪಡೆದುಕೊಳ್ಳುವು ದಕ್ಕೆ ಅರ್ಹನಾಗುತ್ತಾನೆ. ನೀವು ಯಾವುದಾದರೂ ನಗರದ ಅಥವಾ ಬಂಗಲೆಯ ಒಳಹೊಕ್ಕರೆ, ಅಲ್ಲಿ ಯೋಗ್ಯನಾದವನನ್ನು ಕಂಡು ಹಿಡಿ ಯಿರಿ. ಅಲ್ಲಿಂದ ತೆರಳುವ ತನಕವೂ ಅವನ ಜೊತೆ ವಾಸಮಾಡಿರಿ. ''

ಸಂತ ಫ್ರಾನ್ಸಿಸ್‌ನ ಜೀವನಚರಿತ್ರಕಾರನಾದ ಸೆಲೆನೋದ ಥಾಮಸ್‌ನ ಪ್ರಕಾರ ಇದು ಫ್ರಾನ್ಸಿಸ್‌ನ ಜೀವನದ ನಿರ್ಧಾರಕ ಸಮಯವಾಗಿ ಪರಿಣಮಿಸಿತು. ಮೇಲಿನ ಕ್ರಿಸ್ತವಾಣಿಯನ್ನು ಕೇಳಿದ ಫ್ರಾನ್ಸಿಸ್ ಹೀಗೆ ಉದ್ಘೋಷಿಸಿದನು: ''ನಾನು ಇಷ್ಟಪಡುವುದು ಇದನ್ನೇ. ಈ ಉಪದೇಶವನ್ನೇ ನಾನು ಹುಡುಕುತ್ತಿದ್ದುದು. ನನ್ನ ಹೃದಯಾಂತರಾಳದಲ್ಲಿ ನಾನು ಮಾಡಬೇಕೆಂದಿದ್ದುದು ಇದನ್ನೇ.'' ಒಡನೆ ಫ್ರಾನ್ಸಿಸ್ ತನ್ನ ಬೂಟುಗಳನ್ನು ಕಳಚಿ ಕಿತ್ತೆಸೆದನು; ತನ್ನ ಕೈಲ್ಲಿದ್ದ ದಂಡವನ್ನೂ ಎಸೆದುಬಿಟ್ಟನು; ಒರಟೊರಟಾದ ನಿಲುವಂಗಿ ಯನ್ನು ಹಾಕಿಕೊಂಡನು. ಏಸುಕ್ರಿಸ್ತನ ಉಪದೇಶವನ್ನು ಅಕ್ಷರಶಃ ಪಾಲಿಸುತ್ತ, ಅಸಿಸ್ಸಿಗೆ ಸಮೀಪದ ಊರುಗಳಿಗೆ ಹೋಗುತ್ತ ಭಗವಂತನ ಅಪಾರ ಕರುಣೆಯನ್ನೂ, ಪಾಪಕ್ಕೆ ಮಾಡಿಕೊಳ್ಳಬೇಕಾದ ಪಶ್ಚಾತ್ತಾಪವನ್ನೂ ಸಾಮಾನ್ಯ ಜನರಿಗೆ ಬೋಧಿಸಲು ಆರಂಭಿಸಿದನು.

### ಸಂನ್ಯಾಸಿ ಸಂಪ್ರದಾಯ ಸ್ಥಾಪಕನಾಗಿ ಫ್ರಾನ್ಸಿಸ್

ಈ ರೀತಿ ನಿಶ್ಚಯವನ್ನು ಮಾಡಿದ ಫ್ರಾನ್ಸಿಸ್ ಅಸಿಸ್ಸಿಯ ಸುತ್ತ ಮುತ್ತಲ ಪ್ರದೇಶಗಳಲ್ಲಿ ತನ್ನ ಪ್ರವಚನಕಾರ್ಯವನ್ನು ಆರಂಭಿಸಿ ದನು. ಕೆಲವೇ ಕಾಲದಲ್ಲಿ ಬಹಳಷ್ಟು ಅನುಯಾಯಿಗಳನ್ನು ಆಕರ್ಷಿಸಿ ದನು. ೧೨೦೯ರಲ್ಲಿ ಅವನು ತನ್ನ ಅನುಯಾಯಿಗಳಿಗೆ ಒಂದು ನಿಯಮಾಳಿಯನ್ನು ರಚಿಸಿದನು. ಇದನ್ನು 'ಮೂಲ ನಿಯಮ' (Primitive Rule) ಎಂದು ಕರೆಯಲಾಗುತ್ತದೆ. ಈ ನಿಯಮಾ ವಳಿಯಲ್ಲಿ ಬೈಬಲ್ಲಿನಿಂದ ಉದ್ಧೃತವಾದ ಹಲವಾರು ಉಕ್ತಿಗಳು ಇದ್ದವು. ಒಟ್ಟಿನಲ್ಲಿ ಈ ನಿಯಮಾವಳಿಯ ಸಾರಾಂಶವೆಂದರೆ, 'ನಮ್ಮ ಪ್ರಭುವಾದ ಏಸುಕ್ರಿಸ್ತನ ಬೋಧನೆಯಂತೆ ನಡೆದುಕೊಳ್ಳುವುದು ಮತ್ತು ಅವನು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುವುದು' – ಇದೇ ಆಗಿತ್ತು. ಸ್ವಲ್ಪ ಸಮಯದ ನಂತರ, ಫ್ರಾನ್ಸಿಸ್ ತನ್ನ ೧೨ ಅನು ಯಾಯಿಗಳೊಡನೆ ರೋಮಿಗೆ ಹೋದನು. ತನ್ನ ಈ ಪಂಗಡಕ್ಕೆ ಕ್ಯಾಥೊಲಿಕ್ ಚರ್ಚ್‌ನ ಸರ್ವೋಚ್ಚ ಪೀಠಾಧಿಪತಿಯಾಗಿದ್ದ ಪೋಪ್ ಎರಡನೆಯ ಇನ್ನೊಸೆಂಟ್ ಗುರುಗಳ ಅಧಿಕೃತ ಮಾನ್ಯತೆ ಪಡೆದು ಕೊಳ್ಳುವುದು ಈ ತೀರ್ಥಯಾತ್ರೆಯ ಉದ್ದೇಶವಾಗಿತ್ತು. ಕ್ಯಾಥೊಲಿಕ್ ಮಠದ ಯಾವ ತರಬೇತಿ ಇಲ್ಲದಿದ್ದರೂ, ತಾನೇ ತಾನಾಗಿ ಭಗವಂತನ ಆದೇಶದಂತೆ ಅವನು ಈ ಸಂನ್ಯಾಸಿಗಳ ಪಂಗಡವನ್ನು ರೂಪಿಸಿದ್ದನು. ಇದಕ್ಕೆ ಅಧಿಕಾರಪೀಠದಿಂದ ತಕ್ಕ ಮಾನ್ಯತೆಯನ್ನು ಪಡೆದುಕೊಳ್ಳು ವುದು ಆವಶ್ಯಕವಾಗಿತ್ತು. ಇಲ್ಲದಿದ್ದರೆ ಆ ಸಂನ್ಯಾಸಿ ಪಂಗಡವನ್ನು ಕ್ಯಾಥೊಲಿಕ್ ಮಠವು ಬಹಿಷ್ಕರಿಸುವ ಅಪಾಯವಿತ್ತು. ಪೋಪ್ ಗುರುವು ಮೌಖಿಕವಾಗಿ ಈ ಪಂಗಡದ ಅಸ್ತಿತ್ವವನ್ನು ಮಾನ್ಯಮಾಡಿದ ನಾದರೂ, ಲಿಖಿತವಾಗಿ ದಾಖಲೆಪತ್ರವನ್ನು ನೀಡಲು ನಿರಾಕರಿಸಿ ದನು. ಈ ಘಟನೆಯು ನಡೆದದ್ದು ಏಪ್ರಿಲ್ ೧೬, ೧೨೧೦ರಂದು. ಈ ದಿನವನ್ನು ಫ್ರಾನ್‌ಸಿಸ್ಕನ್ ಸಂನ್ಯಾಸ ಪಂಗಡದ ಅಧಿಕೃತ ಸ್ಥಾಪನಾ ದಿವಸವಾಗಿ ಆಚರಿಸಲಾಗುತ್ತದೆ. ಈ ನೂತನ ಪಂಗಡದ ಸದಸ್ಯರನ್ನು 'ಕೆಳಮಟ್ಟದ ಸಹೋದರರು' (Friars Minor) ಕರೆಯುವುದು ವಾಡಿಕೆಯಾಯಿತು. ಅವರಿಗೆ ಯಾವ ಪ್ರಾಪಂಚಿಕ ಸ್ವತ್ತೂ ಇರಲಿಲ್ಲ. ಅವರು 'ಬೀದಿ ಬೋಧಕರು.' ಬೀದಿಬೀದಿಯಲ್ಲಿ ಸುತ್ತುತ್ತ ಅವರು ಜನಗಳಿಗೆ ಬೋಧನೆ ಮಾಡುತ್ತಿದ್ದರು. ಹೀಗಿದ್ದಾಗ್ಯೂ ಪೊರ್ಟಿಯುನ್ ಕುಲ ಎಂಬ ಸ್ಥಳವನ್ನು ಅವರು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡಿ ದ್ದರು. ನಿಧಾನವಾಗಿ ಅವರು ಇಡೀ ಇಟಲಿ ದೇಶದಲ್ಲಿ ತಮ್ಮ ಪ್ರಭಾವ ವನ್ನು ಬೀರಿದರು.


ಏಸುಕ್ರಿಸ್ತನ ಜೀವನ ಮತ್ತು ಅವನ ದಿವ್ಯಕಾರ್ಯವನ್ನು ಏಸು ಕ್ರಿಸ್ತನು ತೋರಿದ ದಾರಿಯಲ್ಲಿಯೇ ಚಾಚೂತಪ್ಪದೆ ಅನುಸರಿಸಲು ಅತ್ಯಂತ ಗಂಭೀರವಾಗಿ ನಿಶ್ಚಯವನ್ನು ಮಾಡಿ, ಅದನ್ನು ಅಕ್ಷರಶಃ ಪರಿಪಾಲಿಸಿದವನಲ್ಲಿ ಫ್ರಾನ್ಸಿಸ್ ಅಗ್ರಗಣ್ಯನು. ಈ ದಿಶೆಯಲ್ಲಿ ಅವನು ತನ್ನದೇ ಆದ ಸಂನ್ಯಾಸೀ ಪಂಗಡವನ್ನು ಆರಂಭ ಮಾಡಿದ್ದು ಅವನ ಜೀವನದ ಬಹು ಪ್ರಮುಖ ಮೈಲುಗಲ್ಲಾಗಿದೆ.


*(ಮುಂದಿನ ಸಂಚಿಕೆಗೆ)*

# ದೇವರಿಗೆ ಪತ್ರ ಬರೆದ ಭಕ್ತ

ಕಥೆ: ಆರ್.ವಿ. ಚಿತ್ರ: ಶಂಕರ್

**1** ನರಸಿಂಹ ಮೆಹತಾ (ಅಥವಾ ನರಸೀ ಮೆಹತಾ) ಶ್ರೀಕೃಷ್ಣನ ದೊಡ್ಡ ಭಕ್ತನಾಗಿದ್ದ. ಅವನ ಪತ್ನಿ ಮನೇಕಾ ಗೌರಿ. ಅವರಿಗೊಬ್ಬಳು ಮಗಳಿದ್ದಳು, ಅವಳೇ ಕುನ್ವರ್ ಬಾಯಿ. ಮೂವರೂ ಶ್ರೀಕೃಷ್ಣನ ಪರಮ ಭಕ್ತರಾಗಿದ್ದರು.








5
ಶ್ರೀಮಂತ ಜಮೀನ್ದಾರನೇ ಎಲ್ಲ ಖರ್ಚನ್ನೂ ವಹಿಸಿದ್ದರಿಂದ ವಿವಾಹವು ಸಂಭ್ರಮದಿಂದ ನೆರವೇರಿತು. ಆದರೆ ಜಮೀನ್ದಾರನ ಪತ್ನಿ ರಾಣಿಗೆ ತನ್ನ ಪತಿಯೇ ಎಲ್ಲ ಖರ್ಚನ್ನೂ ವಹಿಸಿದ ವಿಷಯ ತಿಳಿದಾಗ ಅಸಾಧ್ಯ ಕೋಪ ಬಂತು.
6
ಓ ನರಸಿಂಹ ಮೆಹತಾ! ನನ್ನ ಪತಿಯನ್ನು ಮೋಸಗೊಳಿಸಿ ನೀನು ಈ ಮದುವೆಯನ್ನು ಮಾಡಿಸಿದ್ದೀಯೆ. ನಿನ್ನ ಕಡೆಯಿಂದ ಏನೂ ಉಡುಗೊರೆಯಿಲ್ಲದೆ ನಾನು ಈ ಮದುವೆಯನ್ನು ಮನ್ನಿಸಲಾರೆ. ನಿನ್ನ ಮಗಳನ್ನು ಹಿಂದಕ್ಕೆ ಕರೆದುಕೊಂಡು ಹೋಗು!
ಕೃಷ್ಣಾ! ಎಲ್ಲವೂ ನಿನ್ನ ಅಗೋಚರ ಲೀಲೆ!
ರಾಣಿಯ ಕೋಪದ ಮುಂದೆ ಜಮೀನ್ದಾರ ಅಸಹಾಯಕನಾಗಿದ್ದ.
7
ಕೆಲವು ತಿಂಗಳ ನಂತರ...
ಕುನ್ವರ್ ಬಗ್ಗೆ ಜನ ಏನೇನೋ ಮಾತನಾಡುವುದನ್ನು ಕೇಳಿದಾಗ ನನಗೆ ಕಷ್ಟವಾಗುತ್ತಿದೆ. ಅವಳನ್ನು ನಾವು ಮತ್ತೆ ಗಂಡನ ಮನೆಗೆ ಏಕೆ ಕರೆದುಕೊಂಡು ಹೋಗಬಾರದು?
ನಾಳೆ ನಾವು ಪ್ರಯತ್ನಿಸೋಣ.
ಅಂದು ರಾತ್ರಿ ಕನಸಿನಲ್ಲಿ ...
ನರಸೀ ಮೆಹತಾ! ಯಾವುದೇ ಹಿಂಜರಿಕೆಯಿಲ್ಲದೆ ನಿನ್ನ ಮಗಳನ್ನು ಅವಳ ಗಂಡನ ಮನೆಗೆ ಕರೆದುಕೊಂಡು ಹೋಗು.
8
ಕುನ್ವರ್ ಬಾಯಿಯನ್ನು ಅವಳ ಹೆತ್ತವರು ಗಂಡನ ಮನೆಗೆ ಕರೆದುಕೊಂಡು ಹೋದರು.
ನಿಲ್ಲಲ್ಲಿ! ನಿನ್ನನ್ನು ಯಾರು ಬರಹೇಳಿದರು?
ರಾಣಿ! ಇಂದು ಶುಕ್ರವಾರ. ದೇವತೆಯಾದ ಮಹಾಲಕ್ಷ್ಮಿಗೆ ವಿಶೇಷ ದಿವಸ. ನಿನ್ನ ಸೊಸೆಯನ್ನು ಆನಂದದಿಂದ ಬರಮಾಡಿಕೋ. ಉಳಿದ ವಿಷಯಗಳನ್ನೆಲ್ಲ ನಾವು ಆಮೇಲೆ ಮಾತನಾಡೋಣ.


9
10
ನರಸಿಂಹ ಮೆಹತಾನಿಗೆ ಸಮಾಧಾನವಾಯಿತು. ಆಗ ರಾಣಿ ಅವನ ಬಳಿಗೆ ಬಂದಳು..
ನರಸಿಂಹ ಮೆಹತಾ! ನಿನ್ನ ಮಗಳನ್ನು ಬರಿಗೈಯಲ್ಲಿ ಕರೆತರಲು ನಿನಗೆಷ್ಟು ಧೈರ್ಯ?
ಅಮ್ಮಾ, ನಾನು ಎಲ್ಲ ವಿಷಯದಲ್ಲೂ ದೇವರನ್ನೇ ಅವಲಂಬಿಸಿದ್ದೇನೆ. ನಿಮಗೇನು ಬೇಕಾಗಿದೆ ಎಂಬುದನ್ನು ದಯವಿಟ್ಟು ತಿಳಿಸಿ. ನಾಳೆ ಸಾಯಂಕಾಲದೊಳಗಾಗಿ ಅದನ್ನು ತರುತ್ತೇನೆ.
ಇಲ್ಲಿದೆ ಪಟ್ಟಿ. ಏನನ್ನೂ ಬಿಡಬಾರದು !
11
ನರಸಿಂಹ ಮೆಹತಾ ರಾಣಿ ನೀಡಿದ ಪಟ್ಟಿಯನ್ನು ಶ್ರೀಕೃಷ್ಣನ ಮುಂದಿಟ್ಟು ಪ್ರಾರ್ಥಿಸಿದ. ಆಗ ಭಗವಂತನ ಮಹಿಮೆಯನ್ನು ಸ್ತುತಿಸುವ ಭಜನೆಯ ಗುಂಪೊಂದು ಅಲ್ಲೇ ಸಾಗಿ ಬಂತು.
12
ಮೆಹತಾಜಿ! ನಿಮ್ಮ ದರ್ಶನವಾದುದು ನಮ್ಮ ಪುಣ್ಯ! ನಾವು ದ್ವಾರಕೆಗೆ ಹೋಗುತ್ತಿದ್ದೇವೆ. ದಯವಿಟ್ಟು ನಮಗೊಂದು ಸಹಾಯ ಮಾಡಿ. ದ್ವಾರಕೆಯಲ್ಲಿ ನಿಮಗೆ ಗೊತ್ತಿರುವ ಶ್ರೀಮಂತರು ಯಾರಾದರೂ ಇದ್ದಾರೆಯೆ? ದಾರಿಯಲ್ಲಿ ತುಂಬಾ ಮಂದಿ ಡಕಾಯಿತರಿದ್ದಾರೆ. ಆದ್ದರಿಂದ ನಮ್ಮ ಹಣವನ್ನೆಲ್ಲ ನಿಮ್ಮ ಬಳಿ ಇಟ್ಟು, ಅದನ್ನು ನಿಮ್ಮ ದ್ವಾರಕೆಯ ಸ್ನೇಹಿತರಿಂದ ಪಡೆಯುತ್ತೇವೆ. ದಯವಿಟ್ಟು ನಮಗೆ ರಶೀತಿ ಹಾಗೂ ಪರಿಚಯ ಪತ್ರ ಕೊಡಿ.
ಭಕ್ತರೇ, ನಿಮ್ಮ ಸೇವೆಗೆ ನಾನು ಸದಾ ಸಿದ್ಧ. ದ್ವಾರಕೆಯಲ್ಲಿ ನನಗೊಬ್ಬರ ಪರಿಚಯವಿದೆ. ಅವರ ಹೆಸರು ಶ್ಯಾಮಲ ಶಹಾ ಎಂದು. ಅವರು ಆಗರ್ಭ ಶ್ರೀಮಂತರು. ಅವರು ನಿಮಗೆ ಸಹಾಯ ಮಾಡುವರು.